ದಿನಾಂಕ 09-12-2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಮ್.ಕೆ.ಎನ್ ವಕೀಲರಿಂದ

ನಿವೇಶನವನ್ನು ಒತ್ತುವರಿ ಮಾಡಿರುವ ಕಾರಣ ದಾವೆ ಸಲ್ಲಿಸಿದ್ದೇವೆ. 4ರಿಂದ 5 ಅಡಿ ಅಗಲ ಸುಮಾರು 20 ಅಡಿ ಉದ್ದ ಒತ್ತುವರಿ ಮಾಡಿರುವುದಾಗಿ ಸಲ್ಲಿಸಿದ್ದೇನೆ. ಆ ಸಂಬಂಧ ದಾಖಲೆ ಹಾಜರುಪಡಿಸಿದ್ದೇನೆ. ನೊಂದಣಿ ದಾಖಲೆ ಹಾಜರುಪಡಿಸಿದ್ದೇನೆ. ನೊಂದಣಾಧಿಕಾರಿಗಳು ನೀಡಿರುವ ಅಳತೆ ಹಾಜರುಪಡಿಸಿದ್ದೇನೆ. ಸರ್ವೆನಂಬರ್8-1ರಲ್ಲಿ ಒತ್ತುವರಿ ಮಾಡಿರುತ್ತಾರೆ. ಆ ಸರ್ವೆ ನಂಬರ್‌ನಲ್ಲಿ ಒಟುಟ 9 ಗುಂಟೆ ಸ್ವತ್ತು ಇದೆ. ಆ ಪೈಕಿ 3 ಗುಂಟೆ ಕೊಂಡಿರುತ್ತೇನೆ. 6 ಗುಂಟೆ ಉಳಿಕೆ ಇರುತ್ತದೆ. ಸರ್ವೆ ನಂಬವರ್ 8-1ರಲ್ಲಿ 2 ಗುಂಟೆ ಅನ್ಯಸಂಕ್ರಮಣವಾಗಿಲ್ಲ. ಉಳಿಕೆ 8 ಗುಎಂಟೆ ಅನ್ಯಸಂಕ್ರಮಣವಾಗಿದೆ ಆಗಿದೆ. ಅದರಲ್ಲಿ ರಸ್ತೆ ಒಳಚರಂಡಿ ವಿದ್ಯುತ್‌ಕಂಬಗಳನ್ನು ಹಾಕಲಾಗಿದೆ ಎಂದರೆ ಸರಿಯಲ್ಲ. ಒಟ್ಟಾರೆ 9 ಗುಂಟೆ ಸ್ವತ್ತಿನ ಪೈಕಿ ಪ್ರತಿವಾದಿಗಳು 4-5 ವರ್ಷಗಳ ಹಿಂದೆ ಮನೆ ಕಟ್ಟಿರುತ್ತಾರೆ. ಪ್ರತಿವಾದಿಗಳು 10 ವರ್ಷದ ಹಿಂದೆ ಮನೆ ಕಟ್ಟಿ ಪುರಸಭೆಯಿಂದ ನೀರಿನ ಸೌಲಭ್ಯ ಮತ್ತು ವಿದ್ಯುತ್ ಸೌಲಭ್ಯ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಒಟ್ಟು 9 ಗುಂಟೆ ಸ್ವತ್ತಿನಲ್ಲಿ ದಕ್ಷಿಣಕ್ಕೆ ಗ್ರೀನ್‌ವುಡ್ ಶಾಲೆ ಕಾಪೌಂಡ್, ಪಶ್ಚಿಮಕ್ಕೆ ರಸ್ತೆ, ಮತ್ತು ದಕ್ಷಿಣಕ್ಕೆ ಕೆಹೆಚ್‌ಬಿ ಕಾಲೋನಿಯ ಮನೆಗಳನ್ನು ಸಂಪೂರ್ಣವಾಗಿ ಕಟ್ಟಲಾಗಿದೆ ಎಂದರೆ ಸರಿ. ಆ ಸ್ವತ್ತಿನ ಪೂರ್ವಕ್ಕೆ ಯಾವುದೇ ಲೇಔಟ್ ಆಗಿಲ್ಲ ಪರಿವರ್ತನೆಗೊಂಡಿರುತ್ತದೆ. 1 ಮತ್ತು 2ನೇ ಪರತಿವಾದಿಗಳು ದಿಃ 17-02-1995ರಲ್ಲಿ ಎಮ್‌ಎಸ್ ಶಾಂತರಾಜುರವರು ಖರೀದಿಸಿದ್ದತಂಹ 2 ಗುಂಟೆ ಜಮೀನನ್ನು ಖರೀದಿಗೆ ಪಡೆದರು ಎಂದರೆ ಸರಿ.

ಸರ್ವೆನಂಬರ್ 8-39 ದುರಸ್ತು ಆಗಿದೆ ಎಂದರೆ ಸರಿ. ಬೇರೆ ಕಡೆ ದುರಸ್ತು ಆಗಿದೆ. ವಾದ ಪತ್ರದಲ್ಲಿ ಸರ್ವೆ ನಂಬರ್ 8-1 ಎಂದು ದುರಸ್ತು ಆಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಖರೀದಿಗೆ ಪಡೆದಿರುವ 3 ಗುಂಟೆಯ ಸ್ವತ್ತಿಗೆ ರಸ್ತೆ ಮಾಡಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕ್ರಯಕ್ಕೆ ಪಡೆದ 1995ರಿಂದಲೂ ಖಾತೆ ಮಾಡಿಸಿಕೊಂಡು ಮನೆ ಕಟ್ಟಿ ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒತುತವಾರಿ ಬಗೆಗ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನಂದರೆ ಸರಿಯಲ್ಲ. ಆಯುಕ್ತರಿಗೂ ಸಹ ದಾಖಲೆ ನೀಡದೆ ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.